ದಿ: 05.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 1, 2 ಹಾಗೂ 5ನೇ ಪ್ರತಿವಾದಿ ಪರ ಶ್ರೀ ವಿ.ವಿ. ವಕೀಲರಿಂದ:-**

2. ಸದರಿ 41 ಎಕರೆ ಜಮೀನಿನ ಸಂಬಂಧ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಸದರಿ ನಂದಾಲು ಮುನಿಯಪ್ಪರವರ ಹೆಸರಿಗೆ ಯಾವುದೇ ಕಂದಾಯ ದಾಖಲೆಗಳು ಬದಲಾವಣೆ ಆಗಿತ್ತೇ ಇಲ್ಲವೇ ನನಗೆ ತಿಳಿದಿಲ್ಲ. ಗಂಗಯ್ಯ ಎನ್ನುವವರು ದಾವಾ ಸ್ವತ್ತಿನ 2 ಎಕರೆ ಜಮೀನನ್ನು ಖರೀದಿಸಿದ್ದಾಗಿ ನಾನು ನನ್ನ ವಾದ ಪತ್ರದಲ್ಲಿ ಬರೆಸಿದ್ದು ಸದರಿ ಸ್ವತ್ತಿನ ಕಂದಾಯ ದಾಖಲೆಗಳು ಆತನ ಹೆಸರಿಗೆ ಬದಲಾಗಿತ್ತೇ ಇಲ್ಲವೇ ನನಗೆ ತಿಳಿದಿಲ್ಲ. ನನ್ನ ತಂದೆ ದಾವಾ ಸ್ವತ್ತನ್ನು 1953ರಲ್ಲಿ ಖರೀದಿಸಿರುತ್ತಾರೆ. ಸದರಿ ಕ್ರಯಪತ್ರದಂತೆ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿಗೆ ಬದಲಾಗಿತ್ತೇ ಇಲ್ಲವೇ ನನಗೆ ತಿಳಿದಿಲ್ಲ. ನನ್ನ ತಂದೆ ದಾವಾ ಸ್ವತ್ತಿಗೆ ತೆರಿಗೆ ಪಾವತಿಸಿರುತ್ತಾರೆಯೇ ಇಲ್ಲವೇ ನನಗೆ ತಿಳಿದಿಲ್ಲ. ನಿ.ಪಿ.1 ರಿಂದ 3 ಕ್ರಯಪತ್ರಗಳನ್ನು ಹೊರತುಪಡಿಸಿ ದಾವಾ ಸ್ವತ್ತಿನ ಸಂಬಂಧ ನನ್ನ ಬಳಿ ಬೇರೆ ದಾಖಲೆಗಳು ಇರುತ್ತವೆಯೇ ಎಂದರೆ ಸಾಕ್ಷಿ ನನ್ನ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಆನೇಕಲ್ ತಾಲ್ಲೂಕು, ಬೊಕ್ಕಸಾಗರ ಗ್ರಾಮದಲ್ಲಿ ವಾಸವಿದ್ದರು. ನಂತರ ನನ್ನ ತಂದೆ ಸದರಿ ಗ್ರಾಮವನ್ನು ತೊರೆದು ಬೆಂಗಳೂರು ನಗರಕ್ಕೆ ಹೋಗಿರುತ್ತಾರೆ. ಆತ ಛಾಯಾಗ್ರಾಹಕರಾಗಿದ್ದರು. ದಾವಾ ಸ್ವತ್ತು ಸದರಿ ಮೂಲ ಸರ್ವೆ ನಂ.186ರಲ್ಲಿನ ಒಟ್ಟು 40 ಎಕರೆ 11 ಗುಂಟೆ ಪೈಕಿ ನಿಖರವಾಗಿ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿ ದಾವಾ ಸ್ವತ್ತಿನ ಸರ್ವೆ ನಂ.186/1 ಆಗಿರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.1ರಲ್ಲಿ ಕರಾಬು ಜಮೀನು ಇರುವ ಬಗ್ಗೆ ನಮೂದು ಇದ್ದು ಅದು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ತಿಳಿದಿಲ್ಲ. ಅದು ಯಾವ ಕರಾಬು ಆಗಿರುತ್ತದೆ ಎಂದು ನನಗೆ ತಿಳದಿಲ್ಲ. ಅದು ಎ ಕರಾಬು ಅಥವಾ ಬಿ ಕರಾಬು ಆಗಿರುತ್ತದೆಯೇ ಎನ್ನುವ ಬಗ್ಗೆ ನನಗೆ ತಿಳಿದಿಲ್ಲ. ಸದರಿ 40 ಎಕರೆ 11 ಗುಂಟೆ ಪೈಕಿ ಕರಾಬು ಜಮೀನು ಎಷ್ಟು ಇರುತ್ತದೆ ಎಂದು ನನಗೆ ತಿಳಿದಿಲ್ಲ. ಆ ಪೈಕಿ ಸುಮಾರು 20 ಎಕರೆ 6 ಗುಂಟೆ ಕರಾಬು ಜಮೀನು ಇರುತ್ತದೆ ಎಂದರೆ ನನಗೆ ತಿಳಿದಿಲ್ಲ.

3. ಪ್ರತಿವಾದಿಯರು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ಸರ್ವೆ ನಂ.186ರ ಮೂಲ ಮಾಲೀಕರಾದ ಗೂನ ಮುನಿಯಪ್ಪರವರು ಆ ಪೈಕಿ ಜಮೀನನ್ನು ಹಲವು ಜನರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮೂಲ ಸರ್ವೆ ನಂ.186

ಹಾಲಿ ಹಲವು ಪೋಡುಗಳಾಗಿವೆ ಎಂದರೆ ಸರಿ. ದಾವಾ ಸ್ವತ್ತು 1ನೇ ಪೋಡಿನಲ್ಲಿ ಇರುತ್ತದೆ. ನನ್ನ ತಂದೆ ಖರೀದಿಸಿದ ಕ್ರಯಪತ್ರ ಹಾಗೂ ಅದರ ಪೂರ್ವ ಮಾಲೀಕರಾದ ಗಂಗಯ್ಯರವರ ಕ್ರಯಪತ್ರದಲ್ಲಿ ಸ್ವತ್ತಿನ ಸರ್ವೆ ನಂಬರನ್ನು 186 ಎಂದು ನಮೂದಿಸಿರುತ್ತಾರೆ. ಸದರಿ ಕ್ರಯಪತ್ರಗಳಲ್ಲಿ ಸರ್ವೆ ನಂ.186/1 ಎಂದು ನಮೂದು ಇಲ್ಲ ಎಂದರೆ ಸರಿ. ಸದರಿ ಸರ್ವೆ ನಂ.186ರ ಪಹಣಿ ಪತ್ರಿಕೆಗಳನ್ನು ನಾನು ನೋಡಿರುವುದಿಲ್ಲ. ಸದರಿ ಸರ್ವೆ ನಂ.186ರಲ್ಲಿ ಹಾಲಿ 5 ಪೋಡುಗಳಾಗಿವೆ ಎಂದರೆ ನನಗೆ ತಿಳಿದಿಲ್ಲ. ಸದರಿ ಸಂಗತಿ ನನಗೆ ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತನ್ನು ನನ್ನ ತಂದೆ ಖರೀದಿಸಿದ್ದ ಸಮಯ ಸ್ವತ್ತಿನ ಸರ್ವೆ ಮಾಡಿಸಿದ್ದರು. ಆ ಸಂಬಂಧ ದಾಖಲೆ ಇರುತ್ತವೆ, ಅದನ್ನು ನನ್ನ ವಕೀಲರಿಗೆ ನೀಡಿದ್ದೇನೆ. ಸದರಿ ಸರ್ವೆಯ ಸಮಯ ದಾವಾ ಸ್ವತ್ತಿನ ಗಡಿಗಳನ್ನು ಗುರುತಿಸಿದ್ದರು. ಆ ಸಮಯ ಸ್ವತ್ತಿನ ಪೋಡಿ ಮಾಡಿ ದಾವಾ ಸ್ವತ್ತಿಗೆ ಸರ್ವೆ ನಂ.186/1 ಎಂದು ಹೊಸ ಸರ್ವೆ ನಂಬರ್ ನೀಡಿರುತ್ತಾರೆ. ಸದರಿ ಸರ್ವೆ ದಾಖಲೆಗಳಲ್ಲಿ ಯಾರ ಹೆಸರು ದಾಖಲಾಗಿದೆ ಎಂದು ನನಗೆ ತಿಳಿದಿಲ್ಲ. ಸದರಿ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ನಮೂದು ಇಲ್ಲ ಎಂದರೆ ಸರಿ. ಸದರಿ ಸರ್ವೆ ನಂ.186ರ ಸ್ವತ್ತನ್ನು ಸದರಿ ಗೂನ ಮುನಿಯಪ್ಪರವರು 1950-51ರಲ್ಲಿ ಸರ್ಕಾರದ ಸಾರ್ವಜನಿಕ ಹರಾಜಿನಲ್ಲಿ ಖರೀದಿಸಿದ್ದರು ಎಂದರೆ ಸರಿ. ನಂತರ ಆತ ಆ ಪೈಕಿ 4 ಎಕರೆ ಜಮೀನನ್ನು ಮುನಿವೀರಪ್ಪ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಅದರಂತೆ 3 ಎಕರೆ ಜಮೀನನ್ನು ಮುನಿವೀರಮ್ಮ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ತಿಳಿದಿಲ್ಲ. ನಂತರ 12 ಎಕರೆ 11 ಗುಂಟೆ ಜಮೀನನ್ನು ಸಂಜೀವಯ್ಯ, ಮುನಿಸ್ವಾಮಿ ಹಾಗೂ ಮತ್ತೊಬ್ಬರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಉಳಿದ 21 ಎಕರೆ ಜಮೀನನ್ನು ಗುರ್‍ರಪ್ಪ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ.

5. ಸದರಿ ಗುರ್‍ರಪ್ಪ ತಾನು ಖರೀದಿಸಿದ್ದ 21 ಎಕರೆ ಪೈಕಿ 7 ಎಕರೆ ಜಮೀನನ್ನು ರಾಮಕೃಷ್ಣಮೂರ್ತಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಅದರಂತೆ 7 ಎಕರೆ ಜಮೀನನ್ನು ಶ್ರೀಮತಿ. ತಾರಾದೇವಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಅದರಂತೆ ಸದರಿ ಜಮೀನುಗಳಿಗೆ ಹೊಸ ಸರ್ವೆ ನಂಬರ್ 186/1, 186/2, 186/3 ಎಂದು ನೀಡಲಾಗಿದೆ ಎಂದರೆ ನನಗೆ ತಿಳಿದಿಲ್ಲ. ಸದರಿ ರಾಮಕೃಷ್ಣಮೂರ್ತಿ ಹಾಗೂ ಶ್ರೀಮತಿ ತಾರಾದೇವಿರವರ ಕುಟುಂಬಸ್ಥರಿಂದ 2ನೇ ಪ್ರತಿವಾದಿ ತಲಾ 7 ಎಕರೆ ಜಮೀನುಗಳನ್ನು ಖರೀದಿಸಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ.

6. ಅದರಂತೆ 1ನೇ ಪ್ರತಿವಾದಿ ಸದರಿ ಮುನಿವೀರಪ್ಪ, ಮುನಿವೀರಮ್ಮರವರಿಂದ ಒಟ್ಟು 7 ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ.

7. ಸದರಿ ಸರ್ವೆ ನಂ.186ರ ಸಂಪೂರ್ಣ ಸ್ವತ್ತಿಗೆ 2000ನೇ ಸಾಲಿನಲ್ಲಿ ಕಾಂಪೌಂಡ್ ನಿರ್ಮಿಸಲಾಗಿದೆ ಎಂದರೆ ನನಗೆ ತಿಳಿದಿಲ್ಲ. ಸರ್ವೆ ನಂ.186ರ ಜಮೀನಿಗೆ ನಾನು ಹೋಗಿ ಬಂದಿರುತ್ತೇನೆ. 2004ರ ಪೂರ್ವದಲ್ಲಿ ಸದರಿ ಸಂಪೂರ್ಣ ಜಮೀನಿನಲ್ಲಿ ವಾಟಿಕಾ ಲೇಔಟ್ ಅನ್ನು ನಿರ್ಮಿಸಲಾಗಿದೆ ಎಂದರೆ ಸಾಕ್ಷಿ ಅದನ್ನು ನೋಡಿರುತ್ತೇನೆ, ಆದರೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ಲೇಔಟ್ ಅನ್ನು ಆಜು-ಬಾಜು ಜಮೀನುಗಳನ್ನು ಸೇರಿಸಿಕೊಂಡು ಸಹ ನಿರ್ಮಿಸಲಾಗಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಲೇಔಟ್.ಗೆ ಮುಖ್ಯ ದ್ವಾರ ಇರುತ್ತದೆ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.186 ಅನ್ನು ವ್ಯವಸಾಯೇತರ ಉಪಯೋಗಕ್ಕಾಗಿ ಭೂ ಪರಿವರ್ತನೆ ಮಾಡಲಾಗಿದೆ ಎಂದರೆ ಸರಿಯಲ್ಲ. ಆ ಕಾರಣ ದಾವಾ ಸ್ವತ್ತನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ದಾವಾ ಸ್ವತ್ತು ಸದರಿ ಸರ್ವೆ ನಂ.186ರ ಉತ್ತರ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ.

8. ಸದರಿ ಗುರ್ರಪ್ಪರವರು ಸರ್ವೆ ನಂ.186ರ ಪೈಕಿ ಉತ್ತರ-ದಕ್ಷಿಣವಾಗಿ ಪಶ್ಚಿಮದ ಭಾಗವನ್ನು ಖರೀದಿಸಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಉಳಿಕೆ ಪೂರ್ವದ ಸ್ವತ್ತು ಆ ಸಮಯಕ್ಕಾಗಲೇ ಬೇರೆಯವರಿಗೆ ಕ್ರಯವಾಗಿತ್ತು ಎಂದರೆ ನನಗೆ ತಿಳಿದಿಲ್ಲ. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರಗಳಲ್ಲಿ ಸದರಿ ಕ್ರಯಪತ್ರದ ಸಂಗತಿಗಳನ್ನು ನಮೂದಿಸಿರುತ್ತಾರೆ ಎಂದರೆ ಸರಿ. ನಾವು ಈ ದಾವೆಯಲ್ಲಿ ಸದರಿ ಗುರ್ರಪ್ಪರವರನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಗುರ್ರಪ್ಪರವರಿಂದ ಕ್ರಯ ಪಡೆದ ಸದರಿ ರಾಮಕೃಷ್ಣಮೂರ್ತಿ, ತಾರಾದೇವಿ ಹಾಗೂ ಇತರರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಈಗಾಗಲೇ ಹಲವು ಮನೆಗಳನ್ನು ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು, ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ದಾವಾ ಸರ್ವೆ ನಂಬರಿನಲ್ಲಿ ಯಾವುದೇ ಪ್ರತ್ಯೇಕ ಕರಾಬು ಜಮೀನು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು, ನನ್ನ ತಂದೆ ಹಾಗೂ ಆತನಿಗೆ ಕ್ರಯಪತ್ರ ಬರೆದುಕೊಟ್ಟವರು ಎಂದೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸರ್ವೆ ನಂ.186ರ 20 ಎಕರೆ 6 ಗುಂಟೆ ಕರಾಬು ಜಮೀನಿನ ಪೈಕಿ ಯಾವ ಜಮೀನನ್ನು ಖರೀದಿಸಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನನ್ನ ತಂದೆ ಖರೀದಿಸಿದ್ದ ಜಮೀನಿನ

ಪೈಕಿ ಹೈನು ಜಮೀನು ಎಷ್ಟು ಇತ್ತು ಹಾಗೂ ಕರಾಬು ಜಮೀನು ಎಷ್ಟು ಇತ್ತು ಎಂದು ನನಗೆ ತಿಳಿದಿಲ್ಲ, ಸಾಕ್ಷಿ ಮುಂದುವರೆದು ಒಟ್ಟು 2 ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 2 ಎಕರೆ ಜಮೀನು ಅಸ್ತಿತ್ವದಲ್ಲಿರುತ್ತದೆ. ಹಾಲಿ ಸದರಿ ಜಮೀನಿನಲ್ಲಿ ರಸ್ತೆ, ನಿವೇಶನಗಳು ಹಾಗೂ ಮನೆಗಳಿವೆ ಎಂದರೆ ಸಾಕ್ಷಿ ನಿವೇಶನಗಳಿರುತ್ತವೆ ಎಂದು ನುಡಿಯುತ್ತಾರೆ. ಸದರಿ ನಿವೇಶನಗಳನ್ನು 1, 2 ಹಾಗೂ 5ನೇ ಪ್ರತಿವಾದಿಯರು ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ, ಸಾಕ್ಷಿ ಮುಂದುವರೆದು ನಮ್ಮ ಜಮೀನು ಖಾಲಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ಸದರಿ ಗುರ್ರಪ್ಪರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಹಾಗೂ ಅಧಿಕಾರ ಇಲ್ಲದೇ ಇದ್ದರೂ ಪ್ರತಿವಾದಿಯರಿಗೆ ತೊಂದರೆ ನೀಡಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿ-1, 2 ಹಾಗೂ 5ರವರ ಮಾಲೀಕತ್ವಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಅವರುಗಳು ಸದರಿ ಜಮೀನನ್ನು ನಿವೇಶನಗಳಾಗಿ ಪರಿವರ್ತಿಸಿ ಹಲವು ಜನರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಆನೇಕಲ್.**